# www.karunaduexams.com

## ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್-

## ಫೆಬ್ರುವರಿ ,19,20,2017

www.karunaduexams.com

1. “2017 ಲಾರೆಸ್ ವರ್ಷದ ಕ್ರೀಡಾಪಟು ಪ್ರಶಸ್ತಿ” ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ಕ್ರಮವಾಗಿ ಯಾರಿಗೆ ಲಭಿಸಿದೆ?
ಅ) ಉಸೇನ್ ಬೋಲ್ಟ್ ಮತ್ತು ಸಿಮೋನ್ ಬೈಲ್ಸ್
ಆ) ಕ್ರಿಸ್ಟಿಯಾನೊ ರೊನಾಲ್ಡೊ ಮತ್ತು ಸಿಮೋನ್ ಬೈಲ್ಸ್
ಇ) ಲೆಬ್ರೊನ್ ಜೇಮ್ಸ್ ಮತ್ತು ಸೆರೆನಾ ವಿಲಿಯಮ್ಸ್
ಈ) ಲಿಯೊನೆಲ್ ಮೆಸ್ಸಿ ಮತ್ತು ಪಿ ವಿ ಸಿಂಧು
ಉಸೇನ್ ಬೋಲ್ಟ್ ಮತ್ತು ಸಿಮೋನ್ ಬೈಲ್ಸ್
ಫುಟ್ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಮತ್ತು ಲೆಬ್ರೋನ್ ಜೇಮ್ಸ್ ಅವರನ್ನು ಹಿಂದಕ್ಕಿದ ಸ್ಪ್ರಿಂಟ್ ಕಿಂಗ್ ಉಸೇನ್ ಬೋಲ್ಟ್ ಅವರು ಲಾರೆಸ್ ವರ್ಷದ ಶ್ರೇಷ್ಠ ಕ್ರೀಡಾ ತಾರೆ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅವರು ದಾಖಲೆ ಸಮಬಲದ ನಾಲ್ಕನೇ ಬಾರಿ ಈ ಪ್ರಶಸ್ತಿಯಿಂದ ಪುರಸ್ಕೃತ ಗೊಂಡಿದ್ದಾರೆ. ಜಿಮ್ನಾಸ್ಟ್ ಸಿಮೋನ್ ಬೈಲ್ಸ್ ಶ್ರೇಷ್ಠ ವನಿತಾ ಕ್ರೀಡಾತಾರೆ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

2. “Hema Malini: Beyond the Dream Girl” ಪುಸ್ತಕದ ಲೇಖಕರು _________?
ಅ) ರಾಮ್ ಕಮಲ್ ಮುಖರ್ಜಿ
ಆ) ಆಶಾ ಕಿರಣ್
ಇ) ಶತ್ರುಜ್ಞ ಸಿನ್ಹಾ
ಈ) ಅಮರಿಂದರ್ ಗುಪ್ತಾ
ರಾಮ್ ಕಮಲ್ ಮುಖರ್ಜಿ
ಲೇಖಕ ಹಾಗೂ ಅಂಕಣಕಾರ ರಾಮ್ ಕಮಲ್ ಮುಖರ್ಜಿ ಅವರು “Hema Malini: Beyond the Dream Girl” ಪುಸ್ತಕದ ಲೇಖಕರು.

3. 2017 ರಾಷ್ಟ್ರೀಯ ಯಶ್ ಚೋಪ್ರಾ ಸ್ಮರಣಾರ್ಥ ಪ್ರಶಸ್ತಿಗೆ ಯಾರನ್ನು ಆಯ್ಕೆ ಮಾಡಲಾಗಿದೆ?
ಅ) ಶಾರೂಖ್ ಖಾನ್
ಆ) ಅಮೀರ್ ಖಾನ್
ಇ) ಸಂಜಯ್ ದತ್
ಈ) ಅಕ್ಷಯ್ ಕುಮಾರ್
ಶಾರೂಖ್ ಖಾನ್
4ನೇ ರಾಷ್ಟ್ರೀಯ ಯಶ್ ಚೋಪ್ರಾ ಸ್ಮರಣಾರ್ಥ ಪ್ರಶಸ್ತಿಗೆ ಶಾರೂಖ್ ಖಾನ್ ಅವರನ್ನು ಆಯ್ಕೆಮಾಡಲಾಗಿದೆ.


www.karunaduexams.com

4. ಮಲೇಷಿಯಾ ಮಾಸ್ಟರ್ಸ್ ಗ್ರ್ಯಾಂಡ್ ಪ್ರಿಕ್ಸ್ ಗೋಲ್ಡ್-2017 ನಲ್ಲಿ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ಪಿ ವಿ ಸಿಂಧು

ಆ) ಸೈನಾ ನೆಹ್ವಾಲ್

ಇ) ಪಾವೀ ಚೊಚುವಾಂಗ್

ಈ) ಕಾರ್ಲ್ ಫ್ರಾನ್ಸಿಸ್

ಸೈನಾ ನೆಹ್ವಾಲ್

ಮಲೇಷಿಯಾ ಮಾಸ್ಟರ್ಸ್ ಗ್ರ್ಯಾಂಡ್ ಪ್ರಿಕ್ಸ್ ಗೋಲ್ಡ್ ಅಂತಿಮ ಪಂದ್ಯದಲ್ಲಿ ಭಾರತದ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಅವರು ಥಾಲ್ಯಾಂಡ್ ನ 18 ವರ್ಷದ ಪೊರ್ನ್ ಪಾವೀ ಚೊಚುವಾಂಗ್ ಅವರನ್ನು 46 ನಿಮಿಷಗಳ ಆಟದಲ್ಲಿ 22-2-, 22-20 ಸೆಟ್ ಗಳಿಂದ ಮಣಿಸಿದರು.

5. ಈ ಕೆಳಗಿನ ಯಾವುದು ಭಾರತದಲ್ಲಿ 2017ರಲ್ಲಿ ನಡೆಯಲಿರುವ ಫಿಫಾ ಅಂಡರ್-17 ವಿಶ್ವಕಪ್ನ ಟೂರ್ನಮೆಂಟ್ನ ಅಧಿಕೃತ ಲಾಂಛನವಾಗಿದೆ?

ಅ) ಖೇಲೋ ಚೀತಾ

ಆ) ಹಾರುವ ಚಿಟ್ಟೆ

ಇ) ರಾಜಹಂಸ

ಈ) ಸಾರಂಗ

ಖೇಲೋ ಚೀತಾ

ಭಾರತದಲ್ಲಿ 2017ರಲ್ಲಿ ನಡೆಯಲಿರುವ ಫಿಫಾ ಅಂಡರ್-17 ವಿಶ್ವಕಪ್ನ 'ಖೇಲೋ' ಚೀತಾವನ್ನು ಟೂರ್ನಮೆಂಟ್ನ ಅಧಿಕೃತ ಲಾಂಛನವಾಗಿ ಶುಕ್ರವಾರ ಅನಾವರಣಗೊಳಿಸಲಾಗಿದೆ. ಅಂಡರ್-17 ವಿಶ್ವಕಪ್ ಭಾರತದಲ್ಲಿ ಅಕ್ಟೋಬರ್ 6 ರಿಂದ 28ರ ತನಕ ನಡೆಯಲಿದ್ದು, ಟೂರ್ನಮೆಂಟ್ನ ಡ್ರಾ ಪ್ರಕ್ರಿಯೆ 2017ರ ಜು.7ರಂದು ಕೋಲ್ಕತಾದಲ್ಲಿ ನಡೆಯಲಿರುವುದು. ಟೂರ್ನಿಯು ಕೋಲ್ಕತಾ, ಗುವಾಹಟಿ, ಕೊಚ್ಚಿ, ನವಿ ಮುಂಬೈ, ಗೋವಾ ಹಾಗೂ ಹೊಸದಿಲ್ಲಿಯಲ್ಲಿ ನಡೆಯಲಿದೆ. ಈ ತಾಣಗಳಲ್ಲಿ ವಿಶ್ವದಾದ್ಯಂತ ಆಟಗಾರರು ಆಡಲಿದ್ದಾರೆ.

6. ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡವರು ಯಾರು?

ಅ) ಓ ಪನ್ನೀರುಸೆಲ್ವಂ

ಆ) ಕೆ ಪಳನಿಸ್ವಾಮಿ

ಇ) ಶಶಿಕಲಾ ನಟರಾಜನ್

ಈ) ಮರಿಯಪ್ಪನ್

www.karunaduexams.com

ಕೆ ಪಳನಿಸ್ವಾಮಿ

ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಸಿ ವಿದ್ಯಾಸಾಗರ್ ರಾವ್ ಅವರು ಪಳನಿಸ್ವಾಮಿ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

7. "Oh My Gods" ಪುಸ್ತಕದ ಲೇಖಕರು________?

ಅ) ಮನೀಷ್ ಜೆಟ್ಲಿ

ಆ) ಅರುಣ್ ಜೆಟ್ಲಿ

ಇ) ರಾಮಚಂದ್ರ ಗುಹಾ

ಈ) ಮನೋಹರ್ ಪಣಿಕ್ಕರ್

ನಿವೃತ್ತ ಲೆಫ್ಟಿನೆಂಟ್ ಮನೀಷ್ ಜೆಟ್ಲಿ ಅವರು "ಓ ಮೈ ಗಾಡ್ಸ್" ಪುಸ್ತಕದ ಲೇಖಕರು.

8. "2017 ಬ್ರಾಂಡ್ ಲಾರಿಯೆಟ್ ಲೆಜೆಂಡರಿ (Brand Laureate Legendary)" ಪ್ರಶಸ್ತಿ ಯಾರಿಗೆ ಲಭಿಸಿದೆ?

ಅ) ಲತಾ ಮಂಗೇಶ್ಕರ್

ಆ) ಆಶಾ ಬೋಸ್ಲೆ

ಇ) ಚಿತ್ರಾ

ಈ) ನೀತು ಅಂಬಾನಿ

ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಅವರನ್ನು ಬ್ರಾಂಡ್ ಲಾರಿಯೆಟ್ ಲೆಜೆಂಡರಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ವಿಶ್ವಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿರುವ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

9. 2017 ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ಯಾವ ದೇಶದಲ್ಲಿ ನಡೆಯಲಿದೆ?

ಅ) ಭಾರತ

ಆ) ಇಂಗ್ಲೆಂಡ್

ಇ) ಆಸ್ಟ್ರೇಲಿಯಾ

ಈ) ದಕ್ಷಿಣ ಆಫ್ರಿಕಾ

ಇಂಗ್ಲೆಂಡ್

2017 ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ಇಂಗ್ಲೆಂಡ್ ನಲ್ಲಿ 24ನೇ ಜೂನ್ ನಿಂದ 23ನೇ ಜುಲೈ ವರೆಗೆ ನಡೆಯಲಿದೆ.

www.karunaduexams.com

10. ಈ ಕೆಳಗಿನ ಯಾವ ರಾಜ್ಯ ದಕ್ಷಿಣ ಏಷ್ಯಾ ಸ್ಪೀಕರ್ ಗಳ ಸಮಾವೇಶದ ಅತಿಥ್ಯವನ್ನು ವಹಿಸಲಿದೆ?

ಅ) ಮಧ್ಯ ಪ್ರದೇಶ

ಆ) ಕೇರಳ

ಇ) ಗುಜರಾತ್

ಈ) ಆಂಧ್ರ ಪ್ರದೇಶ

ಮಧ್ಯ ಪ್ರದೇಶ

ದಕ್ಷಿಣ ಏಷ್ಯಾ ಸ್ಪೀಕರ್ ಗಳ ಸಮಾವೇಶಕ್ಕೆ ಮಧ್ಯ ಪ್ರದೇಶದ ಇಂಧೋರ್ ನಲ್ಲಿ ಲೋಕ ಸಭಾ ಸ್ಪೀಕರ್ ಸುಮಿತ್ರಾ ಮಹಾಜನ್ ಅವರು ಚಾಲನೆ ನೀಡಿದರು. ಎರಡು ದಿನಗಳ ಕಾಲ ಈ ಸಮಾವೇಶ ನಡೆಯಲಿದೆ. ಆಫ್ಘಾನಿಸ್ತಾನ, ಬಾಂಗ್ಲದೇಶ, ಭೂತಾನ್, ಶ್ರೀಲಂಕಾ, ಮಾಲ್ಡೀವ್ಸ್ ಹಾಗೂ ಭಾರತದ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

www.karunaduexams.com